# ನೀನಾಸಮ್ ರಂಗಶಿಕ್ಷಣ ಕೇಂದ್ರ

ಹೆಗ್ಗೋಡು, ಸಾಗರ, ಕರ್ನಾಟಕ ೫೭೭ ೪೧೭
ದೂರವಾಣಿ ೦೮೧೮೩ - ೨೬೫೬೪೬ ಅಂತರ್ಜಾಲ: www.ninasam.org

## ಡಿಪ್ಲೊಮಾ ಇನ್ ಥಿಯೇಟರ್ ಆರ್ಟ್ಸ್: ೨೦೧೭-೧೮
## ಪ್ರವೇಶ ಕೋರಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಸೂಚನೆಗಳು

ನೀನಾಸಮ್ ರಂಗಶಿಕ್ಷಣ ಕೇಂದ್ರದ ೨೦೧೭-೧೮ನೆಯ ವರ್ಷಕ್ಕೆ ಪ್ರವೇಶ ಬಯಸಿ ಅರ್ಜಿ ಸಲ್ಲಿಸುತ್ತಿರುವ ಅಭ್ಯರ್ಥಿಗಳು ಅರ್ಜಿ ತುಂಬುವಾಗ ಮತ್ತು ಆಮೇಲಿನ ಸಂದರ್ಶನದಲ್ಲಿ ಭಾಗವಹಿಸುವಾಗ ಗಮನಿಸಲೇಬೇಕಾದ ಕೆಲವು ಮುಖ್ಯ ಸೂಚನೆಗಳು ಇಲ್ಲಿವೆ.

**೧. ತರಬೇತಿಯ ಸಾಮಾನ್ಯ ನಿಯಮಗಳು:**

- ರಂಗಶಿಕ್ಷಣ ಕೇಂದ್ರದ ಪರಿಚಯ ಪತ್ರದಲ್ಲಿ ಸೂಚಿಸಿದ ಎಲ್ಲಾ ನಿಯಮಕ್ಕೆ ಹಾಗೂ ಶಿಸ್ತಿಗೆ ಬದ್ಧರಾಗಿರಲು ಸಾಧ್ಯ ಎಂಬುದನ್ನು ನೀವು ದೃಢಪಡಿಸಿಕೊಳ್ಳಬೇಕು. ಮತ್ತು ಈ ಊರಿನ ಹವಾಮಾನ, ಊಟ ತಿಂಡಿ ಹಾಗೂ ವಸತಿಯ ಅನುಕೂಲತೆಗಳಿಗೆ ನೀವು ಹೊಂದಿಕೊಳ್ಳಬೇಕು.
- ಪ್ರತಿದಿನ ಬೆಳಿಗ್ಗೆ ೭ರಿಂದ ರಾತ್ರಿ ೯ರ ವರೆಗೆ (ಅಗತ್ಯ ಬಿಡುವುಗಳೊಂದಿಗೆ) ನಡೆಯುವ ತರಬೇತಿಯ ಕಠಿಣ ದೈಹಿಕ ಮಾನಸಿಕ ಪರಿಶ್ರಮಕ್ಕೆ ನೀವು ತಯಾರಾಗಿರಬೇಕು. ಆಯ್ಕೆಯಾದರೆ, ಇಂಥ ಪರಿಶ್ರಮಕ್ಕೆ ಅಗತ್ಯವಾದ ದೈಹಿಕ-ಮಾನಸಿಕ ಸಾಮರ್ಥ್ಯ ಇದೆಯೆಂದು ನುರಿತ ವೈದ್ಯರಿಂದ ದೃಢೀಕರಣ ಪತ್ರ ತರಬೇಕಾಗುತ್ತದೆ.
- ವರ್ಷದಲ್ಲಿ ಒಮ್ಮೆ ಮಧ್ಯಂತರ ರಜಾದಿನಗಳನ್ನು ಬಿಟ್ಟರೆ ಕೇಂದ್ರವು ಭಾನುವಾರವೂ ಸೇರಿದಂತೆ ಎಲ್ಲಾ ದಿನಗಳಲ್ಲೂ ಕೆಲಸ ಮಾಡುತ್ತದೆ. ಇದಕ್ಕೆ ನೀವು ಸಿದ್ಧರಿರಬೇಕು.
- ತರಬೇತಿಯ ಅವಧಿಯಲ್ಲಿ ಯಾವುದೇ ಕಾರಣಕ್ಕೂ ವೈಯಕ್ತಿಕ ರಜೆ ಕೇಳುವ ಹಾಗಿಲ್ಲ. ಶಿಕ್ಷಣದ ಅವಧಿಯಲ್ಲಿ ಯಾವುದೇ ಸಂದರ್ಶನ ಅಥವಾ ಪರೀಕ್ಷೆಗಳಿಗೆ ಹಾಜರಾಗಲು ಅವಕಾಶ ಇರುವುದಿಲ್ಲ.
- ಅಪರೂಪದ ಸಂದರ್ಭಗಳಲ್ಲಿ ಹೊರತುಪಡಿಸಿ, ೩೦ ವರ್ಷಕ್ಕೆ ಮೀರಿದ ಅಭ್ಯರ್ಥಿಗಳನ್ನು ತರಬೇತಿಗೆ ಆಯ್ಕೆ ಮಾಡಲಾಗುವುದಿಲ್ಲ.

**೨. ಸಂದರ್ಶನದ ಸ್ವರೂಪ ಮತ್ತು ವಿಧಾನ:**

- ೨೦೧೭-೧೮ನೆಯ ವರ್ಷದ ತರಬೇತಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ಇದೇ ೨೦೧೭ ಜೂನ್ ೨೪ ಮತ್ತು ೨೫ ರಂದು (ಶನಿವಾರ ಮತ್ತು ಭಾನುವಾರ ಎರಡೂ ದಿನ) ಸಂದರ್ಶನ ಏರ್ಪಡಿಸಲಾಗಿದೆ. ಅಭ್ಯರ್ಥಿಗಳ ಸಂಖ್ಯೆ ಹೆಚ್ಚಿದ್ದರೆ, ಸಂದರ್ಶನವು ೨೦೧೭ ಜೂನ್ ೨೬ ರಂದು (ಸೋಮವಾರ) ಕೂಡಾ ಮುಂದುವರೆಯುತ್ತದೆ.
- ತಾ. ೨೪ ಜೂನ್ ೨೦೧೭ರ ಬೆಳಿಗ್ಗೆ ೯ ರಿಂದ ಅಭ್ಯರ್ಥಿಗಳ ನೋಂದಾವಣೆ ಮಾಡಿಕೊಂಡ ಬಳಿಕ, ಮೊದಲಿಗೆ ಇಡಿಯ ಗುಂಪಿಗೆ ಒಟ್ಟಾಗಿ ಪ್ರಾಯೋಗಿಕ ಸಂದರ್ಶನ ನಡೆಸಲಾಗುತ್ತದೆ. ಆಮೇಲೆ ೨೪ ಮತ್ತು ೨೫ರಂದು (ಮತ್ತು ಅಗತ್ಯವಿದ್ದರೆ ೨೬ರಂದು ಕೂಡ) ವೈಯಕ್ತಿಕ-ಮೌಖಿಕ ಸಂದರ್ಶನ ನಡೆಸಿ ಸಂದರ್ಶನ ಮುಗಿದ ಒಂದು ಘಂಟೆಯ ಅವಧಿಯಲ್ಲಿ ಫಲಿತಾಂಶ ಪ್ರಕಟಿಸಲಾಗುತ್ತದೆ.
- ಸಂದರ್ಶನಕ್ಕೆ ಬರುವಾಗ, ವಿನಂತಿ ಪತ್ರದೊಂದಿಗೆ ನೀವು ಸಲ್ಲಿಸಿದ ಅಂಕಪಟ್ಟಿ ನಕಲು ಮತ್ತು ಪ್ರಮಾಣಪತ್ರಗಳ ನಕಲಿಗೆ ಸಂಬಂಧಿಸಿದ ಮೂಲಪ್ರತಿಗಳನ್ನು ತಂದು ತೋರಿಸಬೇಕು.
- ಆಯ್ಕೆ ಬಯಸುವ ಪ್ರತಿಯೊಬ್ಬರೂ ತಾ. ೨೪ ಜೂನ್ ೨೦೧೭ರ ಬೆಳಿಗ್ಗೆ ೯ ಗಂಟೆಗೆ ಸಂದರ್ಶನದಲ್ಲಿ ನೋಂದಾಯಿಸಿಕೊಂಡು, ಸಂದರ್ಶನದ ಅಂತ್ಯದವರೆಗೆ ನಡೆಯುವ ಎಲ್ಲ ಕಾರ್ಯಕ್ರಮಗಳಲ್ಲಿಯೂ ಪಾಲ್ಗೊಳ್ಳುವುದು ಅಗತ್ಯ. ಪ್ರಾಯೋಗಿಕ ಸಂದರ್ಶನದಲ್ಲಿ ಅಭ್ಯರ್ಥಿಗಳನ್ನು ತಂಡಗಳಾಗಿ ವಿಭಜಿಸಿ ರಂಗ ಅಭ್ಯಾಸ, ಸಂಗೀತ-ನೃತ್ಯ ಮೊದಲಾದ ಚಟುವಟಿಕೆಗಳನ್ನು ಇಲ್ಲಿಯ ಶಿಕ್ಷಕರು ನಡೆಸುತ್ತಾರೆ. ವೈಯಕ್ತಿಕ, ಮೌಖಿಕ ಸಂದರ್ಶನದಲ್ಲಿ ಪ್ರತಿಯೊಬ್ಬರನ್ನೂ ಪ್ರತ್ಯೇಕವಾಗಿ ಸಂದರ್ಶಿಸಲಾಗುತ್ತದೆ.
- ಈ ಎರಡೂ ಸಂದರ್ಶನಗಳಲ್ಲಿ ಮುಖ್ಯವಾಗಿ ನೀವು ಈಗಾಗಲೇ ಮಾಡಿದ ವಿವಿಧ ರೀತಿಯ ಅಭಿನಯದ ತುಣುಕುಗಳನ್ನೂ ಹಾಗೂ ನಿಮಗೆ ತಿಳಿದಿರುವ ಸಂಗೀತ-ನೃತ್ಯ ಇತ್ಯಾದಿ ಕಲೆಗಳ ಪರಿಚಯವನ್ನೂ ಗಮನಿಸಲಾಗುತ್ತದೆ. ಸಂದರ್ಶನಕ್ಕೆ ಬರುವಾಗ ದೈಹಿಕ ವ್ಯಾಯಾಮಕ್ಕೆ ಅನುಕೂಲವಾಗುವ ಸಡಿಲವಾದ ಉಡುಪು ಧರಿಸಿ ಬರುವುದು ಅಗತ್ಯ.
- ಸಂದರ್ಶನಕ್ಕೆ ಬಂದುಹೋಗುವ ಪ್ರಯಾಣ ವೆಚ್ಚ ಅಥವಾ ಆ ಸಮಯದಲ್ಲಿ ಊಟತಿಂಡಿಗಳ ಖರ್ಚುಗಳನ್ನು ಅಭ್ಯರ್ಥಿಗಳೇ ಭರಿಸಿಕೊಳ್ಳಬೇಕು. ನೀನಾಸಮ್‌ನ ಉಪಹಾರ ಗೃಹದಲ್ಲಿ ಊಟ-ತಿಂಡಿಯ ವ್ಯವಸ್ಥೆ ದೊರೆಯುತ್ತದೆ. ಮತ್ತು, ಸಂದರ್ಶನದ ಮೊದಲ ದಿನವೂ ಸೇರಿ ಆ ದಿನಾಂಕಗಳಲ್ಲಿ ರಾತ್ರಿ ಸರಳವಾದ ವಸತಿಯ ವ್ಯವಸ್ಥೆಯನ್ನು ಉಚಿತವಾಗಿ ಏರ್ಪಡಿಸಲಾಗುತ್ತದೆ.

**೩. ಶಿಕ್ಷಕ ಅಭ್ಯರ್ಥಿಗಳು:**

- ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯು ತನ್ನ ಸುತ್ತೋಲೆ ಸಂಖ್ಯೆ ಇಡಿ ೮೨ ಎಂಸಿಡಿ ೯೬ ದಿನಾಂಕ ೩೦-೦೪-೧೯೯೬ರ ಪ್ರಕಾರ ರಂಗಶಿಕ್ಷಣ ಕೇಂದ್ರದ ತರಬೇತಿಗೆ ಪ್ರತಿವರ್ಷ ಗರಿಷ್ಠ ೫ ಜನ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳ ಶಿಕ್ಷಕರನ್ನು ಡೆಪ್ಯುಟೇಷನ್ ಮೇರೆಗೆ ಯೋಜಿಸಲು ಅನುಮತಿ ನೀಡಿದೆ.

...೨

- ಈ ಯೋಜನೆಯ ಅನ್ವಯ ಕೇಂದ್ರಕ್ಕೆ ಸೇರಿಕೊಳ್ಳಲು ಬಯಸುವ ಶಿಕ್ಷಕರು ಉಳಿದ ಎಲ್ಲಾ ಅಭ್ಯರ್ಥಿಗಳಂತೆಯೇ ಪ್ರವೇಶ ವಿನಂತಿಯನ್ನು ತುಂಬಿಸಿ ಕಳಿಸಿ ಎರಡು ದಿನಗಳ ಸಂದರ್ಶನಕ್ಕೂ ಹಾಜರಾಗಬೇಕು. ಮತ್ತು – ಪ್ರವೇಶ ವಿನಂತಿ ಪತ್ರದ ೩ನೆಯ ಪುಟದಲ್ಲಿರುವ 'ಶಿಕ್ಷಕ ಅಭ್ಯರ್ಥಿಗಳಿಗೆ' ಎಂಬ ಕಾಲಮ್ಮಿನಲ್ಲಿ ಅಗತ್ಯ ವಿವರಗಳನ್ನು ಸ್ಪಷ್ಟವಾಗಿ ನಮೂದಿಸಬೇಕು.
- ಮೇಲ್ಕಂಡ ಸಂದರ್ಶನದಲ್ಲಿ ಆಯ್ಕೆಯಾಗುವ 'ಶಿಕ್ಷಕ-ಅಭ್ಯರ್ಥಿ'ಗಳಿಗೆ ಸಂದರ್ಶನ ಮುಗಿಯುತ್ತಿದ್ದಂತೆ, ಶಿಕ್ಷಣ ಇಲಾಖೆಯ ಸುತ್ತೋಲೆಯ ಪ್ರತಿಯನ್ನೂ ಅಧಿಕೃತ ಆಯ್ಕೆಯ ಪತ್ರವನ್ನೂ ಕೊಡಲಾಗುತ್ತದೆ. ಆಮೇಲೆ ಆಯಾ ಶಿಕ್ಷಕರು, ತಾ ೧೫ ಜುಲೈ ೨೦೧೭ರೊಳಗೆ, ತಮ್ಮ ಜಿಲ್ಲೆಯ ಶಿಕ್ಷಣಾಧಿಕಾರಿಗಳಿಂದ ಅಗತ್ಯ ಪರವಾನಗಿ ಪಡೆದುಕೊಂಡು ತರಬೇತಿಗೆ ಸೇರಿಕೊಳ್ಳಬೇಕು.
- ಶಿಕ್ಷಕ ಅಭ್ಯರ್ಥಿಗಳಿಗೆ ಯಾವುದೇ ವಿದ್ಯಾರ್ಥಿ ವೇತನ ದೊರೆಯುವುದಿಲ್ಲ.
- ಉಳಿದಂತೆ, 'ಶಿಕ್ಷಕ ಅಭ್ಯರ್ಥಿ'ಗಳಿಗೂ ಮತ್ತು ಬೇರೆ ವಿದ್ಯಾರ್ಥಿಗಳಿಗೂ ಯಾವುದೇ ವ್ಯತ್ಯಾಸ ಇರುವುದಿಲ್ಲ. ಕೆಲಸ-ರಜೆ-ಕಾಲಾವಧಿ ಮುಂತಾದ ವಿಷಯಗಳಿಗೆ ಸಂಬಂಧಿಸಿ 'ಶಿಕ್ಷಕ ಅಭ್ಯರ್ಥಿ'ಗಳಿಗೆ ಯಾವುದೇ ವಿಶೇಷ ಸವಲತ್ತು ಇರುವುದಿಲ್ಲ.

**೪. ಬಾಹ್ಯ ಶಿಷ್ಯವೇತನ ಪಡೆಯುವ ಅಭ್ಯರ್ಥಿಗಳು:**

- ರಂಗಶಿಕ್ಷಣ ಕೇಂದ್ರಕ್ಕೆ ಮೊದಲ ಆದ್ಯತೆಯ ಅಂಕಗಳನ್ನು ಪಡೆದು ಆಯ್ಕೆಯಾಗುವ ೧೫ ಅಭ್ಯರ್ಥಿಗಳಿಗೆ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಶಿಷ್ಯವೇತನ ನೀಡುತ್ತದೆ.
- ಹೀಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಶಿಷ್ಯವೇತನ ಪಡೆಯುವ ೧೫ ಜನರಲ್ಲದೆ, ಗರಿಷ್ಠ ೫ ಜನ ವಿದ್ಯಾರ್ಥಿಗಳನ್ನು ರಂಗಶಿಕ್ಷಣ ಕೇಂದ್ರವು 'ಬಾಹ್ಯ ಶಿಷ್ಯವೇತನದ ಅಭ್ಯರ್ಥಿ'ಗಳಾಗಿ ಆಯ್ಕೆ ಮಾಡಲು ಅವಕಾಶ ಇರುತ್ತದೆ.
- ಈ ರೀತಿ 'ಬಾಹ್ಯ ಶಿಷ್ಯವೇತನದ ಅಭ್ಯರ್ಥಿ'ಗಳಾಗಿ ಆಯ್ಕೆಯಾಗುವ ಅಭ್ಯರ್ಥಿಗಳು ತಮ್ಮ ಊಟ-ವಸತಿ ಮತ್ತು ತರಬೇತಿಯ ನಿರ್ವಹಣಾ ವೆಚ್ಚಗಳೆಲ್ಲವೂ ಸೇರಿದಂತೆ ಇಡಿಯ ತರಬೇತಿಯ ಅವಧಿಗೆ ರೂ. ೪೦,೦೦೦-೦೦ ಹಣವನ್ನು ಯಾವುದಾದರೊಂದು ಸಾಂಸ್ಕೃತಿಕ ಸಂಸ್ಥೆಯಿಂದ ದೇಣಿಗೆಯಾಗಿ ನೀನಾಸಮ್‌ಗೆ ಕೊಡಿಸಬೇಕು. ವೈಯಕ್ತಿಕ ಪ್ರಾಯೋಜನೆಗೆ ಅವಕಾಶ ಇಲ್ಲ.
- ಈ ಯೋಜನೆಯ ಅನ್ವಯ ಕೇಂದ್ರಕ್ಕೆ ಸೇರಿಕೊಳ್ಳಲು ಬಯಸುವ ಅಭ್ಯರ್ಥಿಗಳು ಉಳಿದ ಎಲ್ಲ ಅಭ್ಯರ್ಥಿಗಳಂತೆಯೇ ಪ್ರವೇಶ-ವಿನಂತಿಯನ್ನು ತುಂಬಿಸಿ ಕಳಿಸಿ ಎರಡು ದಿನಗಳ ಸಂದರ್ಶನಕ್ಕೂ ಹಾಜರಾಗಬೇಕು. ಮತ್ತು – ಪ್ರವೇಶ ವಿನಂತಿ ಪತ್ರದ ೪ನೆಯ ಪುಟದಲ್ಲಿರುವ 'ಬಾಹ್ಯ ಶಿಷ್ಯವೇತನದ ಅಭ್ಯರ್ಥಿಗಳಿಗೆ' ಎಂಬ ಕಾಲಮ್ಮಿನಲ್ಲಿ ಅಗತ್ಯ ವಿವರಗಳನ್ನು ಸಲ್ಲಿಸಬೇಕು. ಮತ್ತು, ಅಂಥ ಪ್ರಾಯೋಜನೆಯನ್ನು ನೀಡಲೊಪ್ಪಿರುವ ಪ್ರಾಯೋಜಕ ಸಂಸ್ಥೆಯ ಸಮ್ಮತಿಯನ್ನೂ ಅಲ್ಲಿ ನಮೂದಿಸಬೇಕು.
- ಸಂದರ್ಶನದಲ್ಲಿ ಆಯ್ಕೆಯಾಗುವ 'ಬಾಹ್ಯ ಶಿಷ್ಯವೇತನದ ಅಭ್ಯರ್ಥಿ'ಗಳು ತಾ. ೧೫ ಜುಲೈ ೨೦೧೭ರೊಳಗೆ ರೂ. ೪೦,೦೦೦-೦೦ ಹಣವನ್ನು ಪ್ರಾಯೋಜಕ ಸಂಸ್ಥೆಯಿಂದ ಒಂದೇ ಕಂತಿನಲ್ಲಿ ನೀನಾಸಮ್ ಸಂಸ್ಥೆಗೆ ಪಾವತಿ ಮಾಡಿಸಿ ತರಬೇತಿಗೆ ಬಂದು ಸೇರಿಕೊಳ್ಳಬೇಕು. ಯಾವುದೇ ಕಾರಣಕ್ಕೆ ವಿದ್ಯಾರ್ಥಿಯು ಪ್ರವೇಶವಾದ ಬಳಿಕ ಕೇಂದ್ರವನ್ನು ಬಿಟ್ಟರೆ, ಈ ಹಣವನ್ನು ಹಿಂತಿರುಗಿಸಲಾಗುವುದಿಲ್ಲ.
- ಉಳಿದಂತೆ, 'ಬಾಹ್ಯ ಶಿಷ್ಯವೇತನದ ಅಭ್ಯರ್ಥಿ'ಗಳಿಗೂ ಮತ್ತು ಬೇರೆ ವಿದ್ಯಾರ್ಥಿಗಳಿಗೂ ಯಾವುದೇ ವ್ಯತ್ಯಾಸ ಇರುವುದಿಲ್ಲ. ಕೆಲಸ-ರಜೆ-ಕಾಲಾವಧಿ ಮುಂತಾದ ವಿಷಯಗಳಿಗೆ ಸಂಬಂಧಿಸಿ 'ಬಾಹ್ಯ ಶಿಷ್ಯವೇತನದ ಅಭ್ಯರ್ಥಿ'ಗಳಿಗೆ ಯಾವುದೇ ವಿಶೇಷ ಸವಲತ್ತು ಇರುವುದಿಲ್ಲ.

| ಡಿಪ್ಲೊಮಾ ಇನ್ ಥಿಯೇಟರ್ ಆರ್ಟ್ಸ್: ೨೦೧೭-೧೮<br>**ಆಯ್ಕೆಯಾದ ವಿದ್ಯಾರ್ಥಿಗಳು ತರಬೇತಿಗೆ ಹಾಜರಾಗುವಾಗ ತುಂಬಬೇಕಾದ ಶುಲ್ಕಗಳು ಹೀಗಿವೆ:** |
|---|
| **ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶಿಷ್ಯವೇತನದ ವಿದ್ಯಾರ್ಥಿಗಳು**<br>ಊಟ/ವಸತಿ ಹೆಚ್ಚುವರಿ ಶುಲ್ಕ: ರೂ. ೧೨,೦೦೦ (ಇಡಿಯ ವರ್ಷಕ್ಕೆ); ಇತರೆ ಶುಲ್ಕಗಳು: ರೂ. ೧,೦೦೦ (ಇಡಿಯ ವರ್ಷಕ್ಕೆ)<br>ಪರೀಕ್ಷಾ ಶುಲ್ಕ: ರೂ. ೧,೦೦೦ – ಒಟ್ಟು ರೂ. ೧೪,೦೦೦ (ಇಡಿಯ ವರ್ಷಕ್ಕೆ)<br>ಆರೋಗ್ಯ ಠೇವಣಿ: ರೂ. ೫,೦೦೦ (ಆರೋಗ್ಯಕ್ಕಾಗಿ ಖರ್ಚಾದ ಹಣ ಕಳೆದು ಉಳಿದದ್ದನ್ನು ಹಿಂದಿರುಗಿಸಲಾಗುತ್ತದೆ) |
| **ಬಾಹ್ಯಶಿಷ್ಯವೇತನದ ವಿದ್ಯಾರ್ಥಿಗಳು**<br>ಊಟ/ವಸತಿ ಶುಲ್ಕ: ರೂ. ೪೦,೦೦೦ (ಇಡಿಯ ವರ್ಷಕ್ಕೆ); ಇತರೆ ಶುಲ್ಕಗಳು: ರೂ. ೧,೦೦೦ (ಇಡಿಯ ವರ್ಷಕ್ಕೆ)<br>ಪರೀಕ್ಷಾ ಶುಲ್ಕ: ರೂ. ೧,೦೦೦ – ಒಟ್ಟು ರೂ. ೪೨,೦೦೦ (ಇಡಿಯ ವರ್ಷಕ್ಕೆ)<br>ಆರೋಗ್ಯ ಠೇವಣಿ: ರೂ. ೫,೦೦೦ (ಆರೋಗ್ಯಕ್ಕಾಗಿ ಖರ್ಚಾದ ಹಣ ಕಳೆದು ಉಳಿದದ್ದನ್ನು ಹಿಂದಿರುಗಿಸಲಾಗುತ್ತದೆ) |
| **ಶಿಕ್ಷಣ ಇಲಾಖೆಯಿಂದ ನಿಯೋಜಿತರಾದ ವಿದ್ಯಾರ್ಥಿಗಳು**<br>ಊಟ/ವಸತಿ ಶುಲ್ಕ: ರೂ. ೪೦,೦೦೦ (ಇಡಿಯ ವರ್ಷಕ್ಕೆ); ಇತರೆ ಶುಲ್ಕಗಳು: ರೂ. ೧,೦೦೦ (ಇಡಿಯ ವರ್ಷಕ್ಕೆ)<br>ಪರೀಕ್ಷಾ ಶುಲ್ಕ: ರೂ. ೧,೦೦೦ – ಒಟ್ಟು ರೂ. ೪೨,೦೦೦ (ಇಡಿಯ ವರ್ಷಕ್ಕೆ)<br>ಆರೋಗ್ಯ ಠೇವಣಿ: ರೂ. ೫,೦೦೦ (ಆರೋಗ್ಯಕ್ಕಾಗಿ ಖರ್ಚಾದ ಹಣ ಕಳೆದು ಉಳಿದದ್ದನ್ನು ಹಿಂದಿರುಗಿಸಲಾಗುತ್ತದೆ) |

**ಗಮನಿಸಿ:**

**ಸಂದರ್ಶನಕ್ಕೆ ಪ್ರತ್ಯೇಕ ಕರೆಯೋಲೆ ಕಳಿಸುವುದಿಲ್ಲ; ಎಲ್ಲ ಅಭ್ಯರ್ಥಿಗಳು ಸೂಚಿತ ದಿನಾಂಕಗಳಂದು ಹಾಜರಿರಬೇಕು.**